**ಓ.ಎಸ್.ನಂ.65/2016**
**ಪಿ.ಡಬ್ಲ್ಯೂ-1.**

**ದಿಃ 04-09-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 4 ನೇ ಪ್ರತಿವಾದಿ ಪರ ವಕೀಲರಿಂದ.**

ಈ ದಾವೆಯನ್ನು ದಾಖಲು ಮಾಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವ ಐಟಂ 1 ನೇ ಸ್ವತ್ತು ಖುಷ್ಕಿ ಜಮೀನು ಎಂದರೆ ನಿಜ. ನನ್ನ ತಂದೆ ದಾವ ಐಟಂ ನಂ-1 ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನ್ನ ತಂದೆ ಮಂಗೇನಹಳ್ಳಿಯಿಂದ ತೆಗೆದುಕೊಂಡ ಬಂದ ಹಣದಿಂದ ಖರೀದಿಸಿರುತ್ತಾರೆ. ಮಂಗೇನಹಳ್ಳಿ ಗ್ರಾಮದಲ್ಲಿ ನನ್ನ ಚಿಕ್ಕಪ್ಪನಿಗೆ ಸ್ವತ್ತುಗಳನ್ನು ವಹಿಸಿ ಹಣ ತೆಗೆದುಕೊಂಡು ಬಂದು ದಾವ ಐಟಂ ನಂ.1 ಸ್ವತ್ತನ್ನು ಖರೀದಿಸಿರುವ ಬಗ್ಗೆ ದಾಖಲಾತಿಗಳನ್ನು ನನಗೆ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿ ಬಸ್ಸಿನಲ್ಲಿ ನಿರ್ವಾಹಕರಾಗಿ ಕೆಲಸ ಮಾಡುತ್ತಾರೆ ಎಂದರೆ ನಿಜ. ಅವರು 1980 ರಿಂದಲೂ ಬೆಂಗಳೂರಿನಲ್ಲಿಯೇ ವಾಸ ಮಾಡುತ್ತಿದ್ದಾರೆ ಎಂದರೆ ನಿಜ. 2 ನೇ ಪ್ರತಿವಾದಿ ಮುಂಡ್ರೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಬಂದು ಹೋಗಿ ಮಾಡುತ್ತಾರೆ ಎನ್ನುತ್ತಾರೆ. 2 ನೇ ಪ್ರತಿವಾದಿಯ ಹೆಂಡತಿಯ ಊರು ಮುಂಡ್ರೆ ಗ್ರಾಮ ಎಂದರೆ ನಿಜ. 2 ನೇ ಪ್ರತಿವಾದಿಯು ಮುಂಡ್ರೆ ಗ್ರಾಮದ ಖಾಯಂ ವಾಸಿಯಾಗಿದ್ದು ಅಲ್ಲಿಂದ ಬಂದು ಹೋಗಿ ಮಾಡುತ್ತಾರೆ. ಮಲ್ಲೇಶಪ್ಪನವರು ಅವರ ಮದುವೆಗೂ ಮೊದಲು ಮತ್ತು ನಂತರವು ಸಹ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದಾರೆ. ಮಲ್ಲೇಶಪ್ಪನವರು ಸುಮಾರು 5-6 ವರ್ಷಗಳ ಕಾಲ ಬೆಂಗಳೂರಿಗೆ ಹೋಗಿದ್ದರು ಎಂದರೆ ಸರಿಯಲ್ಲ. ಬೆಂಗಳೂರಿನಿಂದ ಬಂದ ನಂತರ ಅವರು ಪ್ರತ್ಯೇಕವಾಗಿ ಮನೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

ದೇವೇಂದ್ರಪ್ಪ ನಾನು ಹಬ್ಬಕ್ಕೆ ಬಂದಾಗಲೆಲ್ಲಾ ನನ್ನನ್ನು ಮಾತನಾಡಿಸುತ್ತಾರೆ. ದೇವೇಂದ್ರಪ್ಪ ಏನು ಕೆಲಸ ಮಾಡುತ್ತಾರೆ ಎಂದು ನಾನು ಅವರನ್ನು ವಿಚಾರಿಸಿರುವುದಿಲ್ಲ. 4 ನೇ ಪ್ರತಿವಾದಿಯ ಮದುವೆ 1989 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ವರ್ಷ ಗೊತ್ತಾಗಿರುವುದಿಲ್ಲ ಆದರೆ ಮದುವೆಯಾಗಿರುತ್ತದೆ ಎನ್ನುತ್ತಾರೆ. 4 ನೇ ಪ್ರತಿವಾದಿಯ ಹೆಸರು ಪಾಲಾಕ್ಷಮ್ಮ ಎಂದರೆ ನಿಜ. ಅವರು ಫ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ನಿಜ. 4 ನೇ ಪ್ರತಿವಾದಿ ಗ್ರಂಥಪಾಲಕರಾಗಿ ಮತ್ತು ಅವರ ಹೆಂಡತಿ ಶಿಕ್ಷಕಿಯಾಗಿ ಇಬ್ಬರು ಸರ್ಕಾರಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ನಿಜ. 1 ನೇ ಪ್ರತಿವಾದಿಗೆ ತರೀಕೆರೆಯ ಬಾಪೂಜಿ ನಗರದಲ್ಲಿ ಒಂದು ನಿವೇಶನ, ಶಿವಮೊಗ್ಗದ ವಿವೇಕಾನಂದ ಬಡಾವಣೆಯಲ್ಲಿ ಒಂದು ನಿವೇಶನ ಇದೆ ಎಂದರೆ ನಿಜ. 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ 3 ಅಂತಸ್ತಿನ ಮನೆಯನ್ನು ಕಟ್ಟಿದ್ದು ನಾನು ಅಲ್ಲಿಗೇ ಹೋಗಿದ್ದೆ ಎಂದರೆ ಸರಿಯಲ್ಲ. ದೇವೇಂದ್ರ ಅವರ ಹೆಂಡತಿ ಹೆಸರಿಗೆ ಹಳಿಯಾರು ಗ್ರಾಮದಲ್ಲಿ 3 ಎಕರೆ ಜಮೀನು ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ಖರೀದಿಸಿದ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ

ಎಂದರೆ ಮುಂದೆ ನೋಡೋಣ ಈಗ ಇಷ್ಟೇ ಸಾಕು ಎನ್ನುತ್ತಾರೆ.

ದಾವ ಐಟಂ ನಂ 5 , 6, 7 ರ ದಾಖಲಾತಿಗಳನ್ನು ನಾನೇ ಪಡೆದಿರುತ್ತೇನೆ. ಲಕ್ಷ್ಮೀ ಬಾರ್ ನಿಂದ ಬಂದ ಆದಾಯದಲ್ಲಿ, 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿಗೆ ಬಂದ ಸಂಬಳದಲ್ಲಿ ದಾವ ಐಟಂ ನಂ. 5 ರಿಂದ 7 ನೇ ಆಸ್ತಿಗಳನ್ನು ಅವರು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ ಇಂದಿಗೆ ಸುಮಾರು 25 ವರ್ಷಗಳಾಗಿರಬಹುದು. ದಾವ ಐಟಂ ನಂ. 5 ಮತ್ತು 6 ನೇ ಸ್ವತ್ತುಗಳನ್ನು ನನ್ನ ಅಣ್ಣ 4 ನೇ ಪ್ರತಿವಾದಿ 2004-05 ರಲ್ಲಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. 4 ನೇ ಪ್ರತಿವಾದಿ ಹರಾಜಿನಲ್ಲಿ ದಾವ ಐಟಂ ನಂ.7 ನೇ ಸ್ವತ್ತನ್ನು 2012-13 ನೇ ಇಸವಿಯಲ್ಲಿ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದಾರೆ ಎನ್ನುವುದನ್ನು ಬಿಟ್ಟರೆ ನನಗೆ ಬೇರೆ ಮಾಹಿತಿ ಗೊತ್ತಿಲ್ಲ ಎನ್ನುತ್ತಾರೆ. ದಾಖಲೆ ನೋಡಿದರೆ ಸ್ವತ್ತುಗಳು ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನನಗೆ ದಾಖಲೆ ನೋಡಿ ಗೊತ್ತಾಗದೇ ಇರುವ ಕಾರಣ ಸ್ವತ್ತುಗಳು ಯಾವ ರೀತಿ ಬಂದಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ಅವು ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ದಾವ ಐಟಂ ನಂ.3 ನೇ ಸ್ವತ್ತನ್ನು 4 ನೇಪ್ರತಿವಾದಿಯ ಹೆಸರಿಗೆ ಪಂಚಾಯಿತಿಯಿಂದ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಬಾಬ್ತು ದಾವ ಐಟಂ ನಂ.3 ನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ. ಅದರ ಬಗ್ಗೆ ದಾಖಲಾತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ದಾವ ಐಟಂ ನಂ.3, 5 ರಿಂದ 7 ನೇ ಸ್ವತ್ತುಗಳು 4 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ.

ದಾವ ಐಟಂ ನಂ.1 ನೇ ಸ್ವತ್ತಿನ ಬಾಬ್ತು ನನ್ನ ತಂದೆ ಮರಣ ಶಾಸನ ಪತ್ರ ಬರೆದಿರುವ ವಿಚಾರ ಅವರು ಮೃತಪಟ್ಟ ನಂತರ ತಿಳಿದಿರುತ್ತದೆ. ನನ್ನ ತಂದೆ ಎಲ್ಲಾ ಮಕ್ಕಳಿಗೂ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿ ಅವರು 6 ಜನ ಮಕ್ಕಳಿಗೂ ಮರಣ ಶಾಸನ ಪತ್ರವನ್ನು ಬರೆದಿದ್ದು ಅವರು ಮರಣ ಶಾಸನ ಪತ್ರವನ್ನು ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ ಎನ್ನುತ್ತಾರೆ. ನನ್ನ ತಂದೆಗೆ ಕೈ ಕಾಲು ಸ್ವಾಧೀನದಲ್ಲಿ ಇರಲಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ದಾಖಲಾತಿ ಇರುವುದಿಲ್ಲ. ದಾವ ಸ್ವತ್ತುಗಳಲ್ಲಿ ಯಾವ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಮತ್ತು ಪಿತ್ರಾರ್ಜಿತ ಸ್ವತ್ತುಗಳು ಎಂದು ನನಗೆ ಹೇಳಲಾಗುವುದಿಲ್ಲ. ದಾವ ಸ್ವತ್ತುಗಳು ಯಾವ ರೀತಿಯ ಸ್ವತ್ತುಗಳು ಎಂದು ಹೇಳುವ ಮಾಹಿತಿ ನನಗೆ ಇಲ್ಲದಿದ್ದರೂ ಸಹ ದೇವೇಂದ್ರಪ್ಪನ ಮಾತು ಕೇಳಿ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 5 ನೇ ಪ್ರತಿವಾದಿ ವಿಶ್ವಾಸದಿಂದ ಇದ್ದೇವೆ. ದಾವ ಐಟಂ ನಂ.3, 5 ರಿಂದ 7 ನೇ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವ ಐಟಂ 1, 2, ಮತ್ತು 4 ನೇ ಸ್ವತ್ತಿನ ಮೇಲೆ ಮಾತ್ರ ಹಕ್ಕು ಇದೆ ಎಂದರೆ ಸಾಕ್ಷಿ ನನಗೇ ಎಲ್ಲಾ ಸ್ವತ್ತುಗಳ ಮೇಲೆ ಹಕ್ಕು ಇದೆ ಎನ್ನುತ್ತಾರೆ.

**<u>ಮರುವಿಚಾರಣೆ</u>** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

Sd/-

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ

ಪ್ರ.ದ.ನ್ಯಾ.ದಂ. ರವರು, ತರೀಕೆರೆ.